**<u>ಸಾಕ್ಷಿಗೆ ದಿನಾಂಕ 13.11.2025 ರಂದು -ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು: 1 ನೇ ಎದುರುದಾರರ ಪರ ಶ್ರೀ.ಎಸ್ ಕೆ  ವಕೀಲರಿಂದಃ</u>**

1. ಮೃತ ನನ್ನ ಪತಿ ಮೂಡುಗೋಪಾಲ್ ಗ್ರಾಮಪಂಚಾಯಿತಿಯಲ್ಲಿ ನೀರುಗಂಟೆ ಕೆಲಸ ಮಾಡುತ್ತಿದ್ದರು. ಅವರಿಗೆ ತಿಂಗಳಿಗೆ 20-25 ಸಾವಿರ ಸಂಬಳ ಬರುತ್ತಿತ್ತು. ನನ್ನ ಮೃತ ಪತಿ ಗ್ರಾಮಪಂಚಾಯಿತಿಯಲ್ಲಿ ಗುತ್ತಿಗೆ ಆಧಾರದ ಮೇಲೆ ನೌಕರರಾಗಿದ್ದರು. ನನ್ನ ಮೃತ ಪತಿಗೆ ಸರ್ಕಾರಿ ರಜಾ ದಿನಗಳು ಇರುತ್ತಿತ್ತು ಎಂದರೆ ಇರಲಿಲ್ಲ. ಅಪಘಾತವಾದ ದಿನ ಭಾನುವಾರವಾಗಿದ್ದು ಆ ದಿನ ಪಂಚಾಯಿತಿಗೆ ರಜೆ ಇತ್ತು ಎಂದರೆ ಸರಿ. ಅಪಘಾತವಾದ ದಿನ ನನ್ನ ಮೃತ ಪತಿ ಬೆಳಗ್ಗೆ ಮನೆಯಲ್ಲಿದ್ದರು. ಆ ದಿನ ನನ್ನ ಪತಿ ನೀರು ಬಿಡುವ ಸಲುವಾಗಿ ಪಂಚಾಯಿತಿಗೆ ಹೋಗುತ್ತೇನೆ ಎಂದು ಹೇಳಿದ್ದರು. ಅಪಘಾತವಾದ ವಿಚಾರವನ್ನು ಪಕ್ಕದ ಮನೆಯವರು ತಿಳಿಸಿರುತ್ತಾರೆ. ದಿ.18.06.2023 ರಂದು ಭಾನುವಾರ ರಜೆ ಇದ್ದರೂ ಸಹ ನನ್ನ ಪತಿ ನೀರು ಬಿಡುವ ಸಲುವಾಗಿ ಪಿ ಡಿ ಓ ರವರ ನಿರ್ದೇಶನದಂತೆ ಹೋಗಿದ್ದರು. ಜೂನ್ ತಿಂಗಳಿನಲ್ಲಿ ತುಂಬಾ ಬಿಸಿಲು ಇರುವ ಕಾರಣ ಗ್ರಾಮಪಂಚಾಯಿತಿಯಿಂದ ನೀರು ಬಿಡುವ ವ್ಯವಸ್ಥೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಎದುರುದಾರರ ವಾಹನವನ್ನು ಗ್ರಾವಪಂಚಾಯಿತಿಯವರು ಗುತ್ತಿಗೆ ಆಧಾರದ ಮೇಲೆ ಪಡೆದುಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಗ್ರಾಮಪಂಚಾಯಿತಿಯವರ ಜೊತೆಗೆ 1 ನೇ ಎದುರುದಾರರು ಮಾಡಿಕೊಂಡ ಒಪ್ಪಂದ ಪತ್ರದ ಬಗ್ಗೆ ನನಗೆ ಗೊತ್ತಿಲ್ಲ. ರಜೆ ದಿನಗಳಲ್ಲಿ 1 ನೇ ಎದುರುದಾರರು ತಮ್ಮ ವಾಹನದ ಚಾಲಕನಿಗೂ ರಜೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ಗುತ್ತಿಗೆ ಆಧಾರದ ಮೇಲೆ ಪಡೆದ ನೀರು ಸರಬರಾಜು ವಾಹನವು ಪಂಚಾಯಿತಿಯ ಸುರ್ಪದಿನಲ್ಲಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಅಪಘಾತದ ದಿನ ಪಿ ಡಿ ಓ ರವರು ಫೋನ್ ಮುಖಾಂತರ ನನ್ನ ಪತಿಗೆ ಬೈಸೆ

ಗ್ರಾಮಕ್ಕೆ ನೀರು ಬಿಡುವಂತೆ ಕೇಳಿಕೊಂಡಿದ್ದರು ಎಂದರೆ ಸರಿ. ಅಪಘಾತದ ದಿನದಂದು ನನ್ನ ಮೃತ ಪತಿ, ಗ್ರಾಮ ಪಂಚಾಯಿತಿ ಪಿ ಡಿ ಓ ಮತ್ತು ಸಂಬಂಧಪಟ್ಟ ಗ್ರಾಮಪಂಚಾಯಿತಿ ಸದಸ್ಯರು ಸೇರಿ ನೀರಿನ ವ್ಯವಸ್ಥೆ ಮಾಡುತ್ತಾರೆ ಎಂದರೆ ಸರಿ. ಅಪಘಾತವಾದ ದಿನ 1 ನೇ ಎದುರುದಾರರ ವಾಹನದ ಖಾಯಂ ಚಾಲಕ ರಜೆ ಮೇಲೆ ಇದ್ದನು ಎಂದರೆ ಸರಿ. ಅಪಘಾತಪಡಿಸಿದ ನೀರಿನ ವಾಹನದ ಚಾಲಕ ಮತ್ತು ನನ್ನ ಪತಿ ಸ್ನೇಹಿತರು ಎಂದರೆ ಸರಿಯಲ್ಲ. ನನ್ನ ಪತಿ ಗ್ರಾಮಪಂಚಾಯಿತಿಯಲ್ಲಿ 25 ವರ್ಷಗಳಿಂದ ಕೆಲಸ ಮಾಡುತ್ತಿದ್ದರು. ಅಪಘಾತವಾದ ದಿನ ನನ್ನ ಪತಿ ಮತ್ತು 1 ನೇ ಎದುರುದಾರರ ವಾಹನದ ಹಂಗಾಮಿ ಚಾಲಕ ನೀರು ಸರಬರಾಜು ಮಾಡಲು ಹೋಗುತ್ತಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಗ್ರಾಮಪಂಚಾಯಿತಿ ಸದಸ್ಯರು ಮತ್ತು ಪಿ ಡಿ ಓ ರವರು ಅಪಘಾತದ ಸ್ಥಳದಲ್ಲಿ ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಪತಿಗೆ ಅಲ್ಪ ಸ್ವಲ್ಪ ವಾಹನ ಚಾಲನೆ ಬರುತ್ತಿತ್ತು ಎಂದರೆ ಸರಿಯಲ್ಲ. ನೀರಿನ ಟ್ಯಾಂಕರ್ ಒಂದು ಮನೆಯಿಂದ ಮತ್ತೊಂದು ಮನೆಗೆ ನೀರು ಸರಬರಾಜು ಮಾಡಲು ಹೋಗಬೇಕಾದರೆ ನನ್ನ ಪತಿ ಟ್ಯಾಂಕರ್ ಚಾಲನೆ ಮಾಡಲು ಕಲಿಯುತ್ತಿದ್ದರು ಎಂದರೆ ಸರಿಯಲ್ಲ. ಅಪಘಾತವಾದ ಸ್ಥಳವನ್ನು ನೋಡಿರುವುದಿಲ್ಲ. ಅಪಘಾತವಾದ ಸ್ಥಳ ಮತ್ತು ನಮ್ಮ ಮನೆಗೆ 2 ಕಿ ಮಿ ಅಂತರವಿರುತ್ತದೆ. ಅಪಘಾತವಾದ ದಿನ ನಾನು ಮನೆಯಲ್ಲಿದ್ದೇನು ಎಂದರೆ ಸರಿ. ಅಪಘಾತದ ಮಾಹಿತಿ ತಿಳಿದ ನಂತರ ನಾನು ಪೊಲೀಸರಿಗೆ ದೂರು ನೀಡಬೇಕಾಗಿತ್ತು ಎಂದರೆ ಕುಮಾರ್ ಎನ್ನುವವರು ದೂರು ನೀಡಿರುತ್ತಾರೆ. ಕುಮಾರ್ ರವರು ಸಹ ಗ್ರಾಮಪಂಚಾಯಿತಿಯ ಸದಸ್ಯರು ಎಂದರೆ ಸರಿ. ದೂರುದಾರ ಕುಮಾರ್ ರವರ ಪರಿಚಯವಿರುವುದಿಲ್ಲ. ಅಪಘಾತವಾದ ಸ್ಥಳ ಮತ್ತು ಅಪಾದಿತ ವಾಹನದ ಮಾಲೀಕರ ಮನೆ ಹತ್ತಿರದಲ್ಲಿದೆ ಎಂದರೆ ನನಗೆ ಗೊತ್ತಿಲ್ಲ. ಅಪಘಾತವಾದ ಸಮಯದಲ್ಲಿ 1 ನೇ ಎದುರುದಾರರು ಅಪಘಾವಾದ ಸ್ಥಳಕ್ಕೆ ಬಂದಿದ್ದರು ಎಂದರೆ ನನಗೆ ಗೊತ್ತಿಲ್ಲ. ಅಪಘಾತದ ದಿನ ಶವ ಸಾಗಾಣಿಕೆ ವೆಚ್ಚ ಮತ್ತು ಅಂತ್ಯ ಸಂಸ್ಕಾರದ ವೆಚ್ಚವನ್ನು 1 ನೇ ಎದುರುದಾರರು ಭರಿಸಿರುತ್ತಾರೆ ಎಂದರೆ ಸರಿಯಲ್ಲ.

ಸದರಿ ವೆಚ್ಚಗಳನ್ನು ಗ್ರಾಮಪಂಚಾಯಿತಿಯವರು 1 ನೇ ಎದುರುದಾರರ ಕಡೆಯಿಂದ ಕೊಡಿಸಿದ್ದರು ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**

**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**